**ದಕ್ಷಿಣ ಕನ್ನಡ ಜಿಲ್ಲೆಯ ಅತೀಹಿಂದುಳಿದ ವರ್ಗದ ಶೇಂದಿ ಮೂರ್ತೆದಾರರ ರಕ್ಷಣೆ ಕುರಿತು**

356 (3270) ಶ್ರೀ ಪ್ರಭಾಕರ್ ಬಂಗೇರ.ಕೆ (ಬೆಳ್ತಂಗಡಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಅತೀ ಹಿಂದುಳಿದ ವರ್ಗದ ಶೇಂದಿ ಮೂರ್ತೆದಾರಿಕೆ ಮಾಡಿ ಕೊಂಡು ಬರುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು? ಅವರ ಹಿತರಕ್ಷಣೆ ಬಗ್ಗೆ ಸರ್ಕಾರದವರು ಕೈ ಗೊಂಡ ಕ್ರಮಗಳೇನು?

ಆ) ಮೂರ್ತೆದಾರಿಕೆಗೆ ಒದಗಿಸಲಾದ ಎಲ್ಲಾ ಸೌಲಭ್ಯಗಳನ್ನು ಜಿಲ್ಲಾ ಮೂರ್ತೆದಾರರ ಸಹಕಾರ ಮಹಾ ಮಂಡಲದ ಮೂಲಕ ಒದಗಿಸುವಂತೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) 676(ಅಂದಾಜು)

ಮೂರ್ತೆದಾರರಹಿತ ಸಂರಕ್ಷಣೆ ವಿಚಾರದಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು ಈ ಕೆಳಗಿನಂತಿರುತ್ತದೆ.

1) ಸೇಂದಿ ಮರವನ್ನು ಉತಾರು ಮಾಡಲು ಸನ್ನದ್ದು ನೀಡಿ ತೆಗೆದ ಸೇಂದಿಯನ್ನು ಸಹಕಾರಿ ಸಂಘಗಳ ಮೂಲಕ ಸರಬರಾಜುಮಾಡಿ ಬೆಲ್ಲವನ್ನು ತಯಾರಿಸಲು ಅನುವು ಮಾಡಿರುತ್ತದೆ.

2) ಸೇಂದಿ ಮರವನ್ನು ಉತಾರು ಮಾಡಲು ಸನ್ನದು ನೀಡಿ ತೆಗೆದ ಸೇಂದಿಯನ್ನು ಸಹಕಾರಿ ಸಂಘಗಳ ಮೂಲಕ ಸರಬರಾಜು ಮಾಡಿ ಫನ್ನಿಯನ್ನು ತಯಾರಿಸಲು ಅನುವು ಮಾಡಿರುತ್ತದೆ.

3) ಸೇಂದಿ ಮರವನ್ನು ಉತಾರು ಮಾಡಲು ಸನ್ನದು ನೀಡಿ ತೆಗದ ಸೇಂದಿಯನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಅನುವು ಮಾಡಿರುತ್ತದೆ.

ಆ) ಮೂರ್ತೆದಾರರಿಗೆ ನೀಡಬೇಕಾದ ಸೌಲಭ್ಯಗಳ ಬಗ್ಗೆ ಅವಕಾಶ ಒದಗಿದಾಗಲೆಲ್ಲಾ ಸರ್ಕಾರವು ಪರಿಶೀಲಿಸಿ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಂಡಿರುತ್ತದೆ.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೇ, ಮೂರ್ತೆದಾರರ ಸಹಕಾರ ಸಂಘಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿಯ ಮಾರಾಟವನ್ನು ಮಾಡುತ್ತಿದ್ದವು. ಅಲ್ಲಿ ಈಚಲು ಫೀಯನ್ನು ಸರ್ಕಾರದವರು ಮನ್ನಾ ಮಾಡಿದ್ದರು. ಆದರೆ 1994-95ನೇ ಸಾಲಿನಲ್ಲಿ ಸುಮಾರು 40 ಲಕ್ಷ ರೂಪಾಯಿಗಳ ಫೀ ಬಾಕಿ ಇತ್ತು. ಅದನ್ನು ಮನ್ನಾ ಮಾಡುತ್ತೇವೆಂಬ ಭರವಸೆಯನ್ನು ಸರಕಾರದವರು ಕೊಟ್ಟಿದ್ದರು. ಆದರೆ ಇದುವರೆಗೂ ಅದನ್ನು ಮನ್ನಾ ಮಾಡಿಲ್ಲ. ಇನ್ನು ಮುಂದೆ ಮನ್ನಾ ಮಾಡುವ ಯೋಚನೆಯು ಸರಕಾರಕ್ಕೆ ಇದೆಯೇ? ಎರಡನೆಯದಾಗಿ ಅಬಕಾರಿ ಇಲಾಖೆಯಿಂದ ಸನ್ನದನ್ನು ನೀಡುವುದನ್ನು ಸಹಕಾರ ಇಲಾಖೆಯ ಮೂಲಕ ಕೊಡುವಂಥ ನಿರ್ಧಾರವು ಸರಕಾರ ಪರಿಶೀಲನೆಯಲ್ಲಿದೆಯೇ?

ಶ್ರೀ ಎಂ.ಎಂ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಈಚಲು ಫೀ ವಸೂಲಾತಿಯ ವಿಚಾರವು ಸರಕಾರದ ಪರಿಶೀಲನೆಯಲ್ಲಿದೆ. ಸುಮಾರು 41 ಲಕ್ಷ ರೂಪಾಯಿಗಳಷ್ಟು ಬಾಕಿ ಇದೆ. ಈ ಹಣವು ಮೂರ್ತೆದಾರರ ಸಂಘದಿಂದ ಬಾಕಿ ರೂಪದಲ್ಲಿ ಬರಬೇಕಾಗಿದೆ. ಈಗ ಆ ಫೀಯನ್ನು ವಸೂಲು ಮಾಡುವುದಿಲ್ಲ. ಬಾಕಿ ಇರುವ ಹಣವನ್ನು ಹೇಗೆ ವಸೂಲು ಮಾಡುವುದು ಅಥವಾ ವಜಾ ಮಾಡಬಹುದು ಎಂಬ ಬಗ್ಗೆ ಸರಕಾರವು ಪರಿಶೀಲನೆ ಮಾಡುತ್ತಿದೆ. ಹಾಗೆಯೇ ಸಹಕಾರ ಸಂಘಗಳ ಕಾಯಿದೆಯಡಿಯಲ್ಲಿ ಮೂರ್ತೆದಾರರ ಸಂಘಗಳನ್ನು ರಿಜಿಸ್ಟರ್ ಮಾಡುವುದು ಇದೆ, ಆ ಸನ್ನದನ್ನು ನವೀಕರಿಸುವಂಥ ಅಧಿಕಾರವನ್ನು ನಮ್ಮಲ್ಲಿ ಇಟ್ಟುಕೊಂಡಿದ್ದೇವೆ, ಯಾವ ಸಹಕಾರ ಸಂಘಗಳ ಕಾಯಿದೆಯಡಿಯಲ್ಲಿ ರಿಜಿಸ್ಟರ್ ಆಗುತ್ತದೆ ಹಾಗೆ ರಿಜಿಸ್ಟರ್ ಆದನಂತರ ಸನ್ನದು ಕೊಡುವ ಅಧಿಕಾರವನ್ನು ನಮ್ಮಲ್ಲಿ ವನು ಇಟ್ಟು ಕೊಂಡಿದ್ದೇವೆ. ಆದನ್ನು ಸಹಕಾರ ಇಲಾಖೆಗೆ ವಾಪಸ್ ಕೊಡುವುದನ್ನು ಸರಕಾರದವರು ಪರಿಶೀಲಿಸುವುದಿಲ್ಲ ಎಂಬ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೇ, ಫೀಯನ್ನು ಮನ್ನಾ ಮಾಡುವ ಮೂಲಕ ಮೂರ್ತೆದಾರರ ಬಡ ಕುಟುಂಬಗಳು ಬದುಕುವಂತೆ ಮಾಡಬೇಕು. ಈ ಬಾಕಿ ಫೀ ಮೊತ್ತವು ಸಹಕಾರ ಸಂಘಗಳ ಮೂಲಕವೇ ಆಗಿರುವಂಥಾದ್ದು. ಆದ್ದರಿಂದ ಅದನ್ನು ಸರಕಾರವು ಮನ್ನಾ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಮೂರ್ತೆದಾರರ ಶ್ರೇಯೋಭಿವೃದ್ಧಿಗಾಗಿ ಮಾನ್ಯ ವೀರಪ್ಪ ಮೊಯಿಲಿಯವರ ಸರಕಾರವು ಅಧಿಕಾರದಲ್ಲಿ ಇದ್ದಾಗ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಜೆಟ್‌ನಲ್ಲಿ ಇಟ್ಟಿದ್ದರು. ಆದರೆ ಅದನ್ನು ಉಪಯೋಗ ಮಾಡಿಲ್ಲ. ಮೂರ್ತೆದಾರರು ಬಹಳ ಹಿಂದುಳಿದ ಮತ್ತು ಬಡವರ್ಗದವರಿದ್ದಾರೆ. ಅವರ ಶ್ರೇಯೋಭಿವೃದ್ಧಿಗಾಗಿ ಸರಕಾರದವರು ಈ ಬಜೆಟ್‌ನಲ್ಲಿ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಕೊಡಬೇಕು. ಅದನ್ನು ಸಹಕಾರ ಸಂಘಗಳ ಮಹಾ ಮಂಡಳದ ಮೂಲಕ ವಿತರಣೆ ಮಾಡಬೇಕೆಂದು ಮತ್ತು ಅಂಥ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಂ. ನಾಣಯ್ಯ : ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸರಕಾರವು ಗಮನದಲ್ಲಿ ಇಟ್ಟುಕೊಳ್ಳುತ್ತದೆ ಎಂದು ಹೇಳಬಯಸುತ್ತೇನೆ.

**ಬಿಜಾಪುರ ತಾಲ್ಲೂಕಿನ ಬಿಜ್ಜರಗಿ ಗ್ರಾಮದಲ್ಲಿ ಕೆರೆ ನಿರ್ಮಾಣದ ಬಗ್ಗೆ**

357 (3260) ಶ್ರೀ ಶಿವಾನಂದ ಸಿದ್ಧರಾಮಗೌಡ ಪಾಟೀಲ್ (ತಿಕೋಟ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕಿನ ಬಿಜ್ಜರಗಿ ಗ್ರಾಮದಲ್ಲಿ ಕೆರೆ ನಿರ್ಮಿಸಲು ಮಂಜೂರಾತಿ ನೀಡಲಾಗಿದೆಯೇ;

ಆ) ನೀಡಿದ್ದರೆ ಕೆರೆಯ ನಿರ್ಮಾಣದ ಕಾಮಗಾರಿ ಮಂಜೂರಾದ ಅನುದಾನವೆಷ್ಟು; ಇದರಲ್ಲಿ ಬಿಡುಗಡೆ ಮಾಡಿದ ಹಣ ಹಾಗೂ ವೆಚ್ಚಮಾಡಿರುವ ಹಣವೆಷ್ಟು;

ಇ) ಕೆರೆಯ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ?